# ಗೋಕುಲದ ಗೋಪಿಯರದೇಸು ಧನ್ಯರೋ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 10.
2. **Note:** This song is not available in other standard books that I referred.

ರಾಗ: ಕೇದಾರಗೌಳ                    ತಾಳ: ಅಟ

ಗೋಕುಲದ ಗೋಪಿಯರದೇಸು ಧನ್ಯರೋ
ಶ್ರೀಕಾಂತನನುರಾಗದಲಿ ಪಾಡುತಿಹರೊ     ॥ ಪ ॥

ಕುಳಿತು ಕರೆವಾಗ ನಿಂತು ಕಳವೆಗಳ ಕುಟ್ಟುವಾಗ
ತಳಿಸಾರಣಿ ಸಮ್ಮಾರ್ಜಿಸುವಾಗ
ಅಳುವ ಮಕ್ಕಳ ತೊಟ್ಟಿಲೊಳಿಟ್ಟು ತೂಗುವಾಗ
ಬೆಳಗುಜಾವದಿ ಮೊಸರ ಕಡೆವಾಗಲು     ॥ ೧ ॥

ನಡೆವಾಗ ನುಡಿವಾಗ ಭೋಜನವ ಮಾಡುವಾಗ
ಉಡುವಾಗ ಆಭರಣ ಇಡುವಾಗಲು
ಮುಡಿವಾಗ ಮಲ್ಲಿಗೆ ಉಯ್ಯಲೆಯನಾಡುವಾಗ
ಅಡಿಗಡಿಗೆ ತಾಂಬೂಲ ಮೆಲುವಾಗಲು     ॥ ೨ ॥

ಪರಿಪರಿ ರಾಗದಿಂದಲಿ ಪರಿಪರಿ ಮಾತಿನಿಂದ
ಪರಿಪರಿ ಗೀತಪ್ರಸಂಗದಿಂದ
ಪರಿಪೂರ್ಣನಾದ ಶ್ರೀ ಪುರಂದರ ವಿಠಲನ
ಹಿರಿದಾಗಿ ಮನದೊಳಗೆ ಸ್ಮರಿಸುತಿಹರು     ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನ ಬಾಲರೂಪದ ನಿತ್ಯ ಸಾನಿಧ್ಯದಿಂದ ಸಂತುಷ್ಟರಾದ ಗೋಪಿಯರ ಮನೋಭಾವವನ್ನು ಅರಿತು ದಾಸರು, ಅವರು ಎಂತಹ ಧನ್ಯಾರೋ! - ಎಂಬ ಉದ್ಗಾರ ತೆಗೆದಿದ್ದಾರೆ.

**ಅನುರಾಗ** = ಪ್ರೀತಿ

**ಕರೆ** = ಹಿಂಡು (ಹಾಲನ್ನು)

**ಕಳವೆ** = ಭತ್ತ

**ಸಮ್ಮಾರ್ಜಿಸು** = ಕಸಹೊಡೆ

**ಉಯ್ಯಾಲೆ** = ಜೋಕಾಲಿ

**ಗೀತಪ್ರಸಂಗ** = ಗಾಯನ ಗೋಷ್ಠಿ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** gokula, gopi, krishna, dhanya, makkalu, udaya, beligge, oota, abharana, mallige, poorna, mana, smarane,
**Pravachana:** NA
**Explanation:** NA